ಸನ್ಯಾಸಿ ಮತ್ತು ಪತಿವ್ರತೆ



✍️ಶ್ರೀವಲ್ಲಿ ರೈ ಮಾರ್ಟೆಲ್

ಒಂದಾನೊಂದು ಕಾಲದಲ್ಲಿ ಒಬ್ಬ ಸನ್ಯಾಸಿ ತಾನು ಏನಾದರೂ ದೊಡ್ಡದನ್ನು ಸಾಧಿಸಬೇಕೆಂದು ಘೋರ ತಪಸ್ಸನ್ನು ಮಾಡುತ್ತಾನೆ. ಹೀಗಿರಲಾಗಿ, ಒಂದು ದಿನ ಅವನು ಧ್ಯಾನದಲ್ಲಿ ಕುಳಿತಿರುವಾಗ ಮೇಲಕ್ಕೆ ಹಾರುತ್ತಿದ್ದ ಒಂದು ಗಿಳಿ ಸನ್ಯಾಸಿಯ ತಲೆಯ ಮೇಲೆ ಹಿಕ್ಕೆ ಹಾಕುತ್ತದೆ. ಒದ್ದೆಯಾದ ತಲೆಯನ್ನು ಸನ್ಯಾಸಿ ಒರೆಸಿಕೊಂಡು ನೋಡಿದಾಗ ಅದು ಗಿಳಿಯ ಬಿಳಿಯಾದ ಹಿಕ್ಕೆ ಆಗಿರುತ್ತದೆ.
ಭಯಂಕರ ಗರ್ವ ಮತ್ತು ಕೋಪಗೊಂಡ ಸನ್ಯಾಸಿ ಉಗ್ರ ರೂಪದಲ್ಲಿ ಕಣ್ಣು ಬಿಟ್ಟು ಗಿಳಿಯ ಕಡೆಗೆ ತೀಕ್ಷ್ಣ ದೃಷ್ಟಿ ಬೀರುತ್ತಾನೆ. ಆ ಭಯಂಕರ ದೃಷ್ಟಿಗೆ ಒಂದೇ ಕ್ಷಣದಲ್ಲಿ ಆ ಗಿಳಿ ಸುಟ್ಟು ಭಸ್ಮವಾಗಿ ಸನ್ಯಾಸಿಯ ಕಾಲ ಬುಡಕ್ಕೆ ಬೀಳುತ್ತದೆ. ಇದನ್ನು ನೋಡಿದ ಸನ್ಯಾಸಿ "ನಾನು ತಪಸ್ಸಿನಲ್ಲಿ ಭಾರಿ ದೊಡ್ಡ ಶಕ್ತಿಯನ್ನು ಪಡೆದುಕೊಂಡಿದ್ದೇನೆ" ಎಂದು ಮನಸ್ಸಿನಲ್ಲಿ ತುಂಬಾ ಖುಷಿಪಡುತ್ತಾನೆ. ಅಷ್ಟೇ ಅಲ್ಲದೆ, ಊರಿನವರಿಗೂ ತನ್ನ ಸಾಮರ್ಥ್ಯವನ್ನು ತೋರಿಸಬೇಕೆಂದು ಮರುದಿನದಿಂದ ಭಿಕ್ಷಾಟನೆಗೆ ಹೊರಡುತ್ತಾನೆ. ಹೀಗೆ ಒಂದು ಮನೆಯ ಬಾಗಿಲಿಗೆ ಹೋಗಿ "ಭಿಕ್ಷಾಂದೇಹಿ" ಎನ್ನುತ್ತಾನೆ. ಸ್ವಲ್ಪ ಸಮಯ ಕಳೆದರೂ ಯಾರೂ ಬಾರದಿದ್ದಾಗ ಮತ್ತೊಮ್ಮೆ "ಭವತಿ ಭಿಕ್ಷಾಂದೇಹಿ" ಎಂದು ದರ್ಪದಿಂದ (ಅಹಂಕಾರದಿಂದ) ಕರೆಯುತ್ತಾನೆ. "ಬಂದೆ, ಬಂದೆ" ಎಂದು ಒಳಗಿನಿಂದ ಧ್ವನಿ ಕೇಳಿಸುತ್ತದೆ. ಆದರೆ ಆರೋಗ್ಯ ಕೆಟ್ಟಿರುವ ಗಂಡ ಮತ್ತು ವಯಸ್ಸಾದ ಮಾವ-ಮಾವಂದಿರ ಸೇವೆ ಮಾಡುತ್ತಿದ್ದ ಆ ಮನೆಯ ಹೆಂಗಸು ಭಿಕ್ಷೆಯ ಅಕ್ಕಿಯನ್ನು ಹಿಡಿದುಕೊಂಡು ಹೊರಗೆ ಬರುವಾಗ ಸ್ವಲ್ಪ ತಡವಾಗುತ್ತದೆ.
ಅದರಿಂದ ಭಯಂಕರ ಕೋಪಗೊಂಡ ಸನ್ಯಾಸಿ, "ಇಂದು ನನ್ನ ಮಹಿಮೆಯನ್ನು ಈ ಊರಿನವರಿಗೆ ತೋರಿಸಬೇಕು" ಎಂದು ಕಣ್ಣು ಬಿಟ್ಟು ಆ ಹೆಂಗಸಿನ ಕಡೆಗೆ ಕೋಪದಿಂದ ನೋಡುತ್ತಾನೆ. ಸೆರಗು ಹೊದ್ದುಕೊಂಡು ವಿನಯದಿಂದ ನಿಂತಿರುವ ಆ ಹೆಂಗಸನ್ನು ನೋಡಿ, "ಇವಳೇನು ಇನ್ನೂ ಸುಟ್ಟು ಬೂದಿಯಾಗುತ್ತಿಲ್ಲವಲ್ಲ?" ಎಂದುಕೊಂಡು ಸನ್ಯಾಸಿ ಮತ್ತಷ್ಟು ಕಣ್ಣುಗಳನ್ನು ಅರಳಿಸಿ ತೀಕ್ಷ್ಣವಾಗಿ ನೋಡುತ್ತಾನೆ.

ಅವನ ಇಂಗಿತವನ್ನು (ಆಲೋಚನೆಯನ್ನು) ಅರಿತುಕೊಂಡ ಆ ಹೆಂಗಸು ಹೀಗೆನ್ನುತ್ತಾಳೆ: "ಏನಯ್ಯಾ, ಹಾಗೆ ಕಣ್ಣುಗಳನ್ನು ಅರಳಿಸಿ ನೋಡುತ್ತಿರುವೆ? ಸುಟ್ಟು ಭಸ್ಮವಾಗಲು ನಾನೇನು ರಾಮಪ್ಪನ ಗಿಳಿ ಎಂದುಕೊಂಡೆಯಾ? ಮೊದಲು ನಿನ್ನ ಅಹಂಕಾರವನ್ನು ಬಿಟ್ಟು ಆಕಾಶದಿಂದ ಭೂಮಿಗೆ ಬಾ" ಎನ್ನುತ್ತಾಳೆ.
"ನಾನು ಕಠಿಣ ತಪಸ್ಸಿನ ಸಾಧನೆಯಿಂದ ಪಡೆದುಕೊಂಡ ವರವು ನಿಮಗೆ ಹೇಗೆ ತಿಳಿಯಿತು?" ಎಂದು ಸನ್ಯಾಸಿ ತಲೆ ತಗ್ಗಿಸಿ ಕೇಳುತ್ತಾನೆ. ಆಗ ಅವಳು, "ನಾನು ನನ್ನ ಧರ್ಮನಿಷ್ಠೆ ಮತ್ತು ನಿಸ್ವಾರ್ಥ ಸೇವೆಯ ಫಲಶ್ರುತಿಯಾಗಿ ನಿನ್ನ ಸ್ವಾರ್ಥವನ್ನು ತಿಳಿದುಕೊಳ್ಳಲು ಸಾಧ್ಯವಾಯಿತು. ನಿನ್ನ ಅಹಂಕಾರವನ್ನು ನೀನು ಬಿಡದಿದ್ದರೆ, ಈ ಕಲಿತ ವಿದ್ಯೆಯು ನಿನಗೆ ಒಲಿಯುವುದಿಲ್ಲ" ಎನ್ನುತ್ತಾಳೆ. ಆ ಘಟನೆಯಿಂದ ಸನ್ಯಾಸಿಗೆ ನಿಜವಾದ ಜ್ಞಾನೋದಯವಾಗುತ್ತದೆ.
ನೀತಿ: ನಮ್ಮ ಅಹಂಕಾರವನ್ನು ನಾವು ಬಿಡದಿದ್ದರೆ, ನಾವು ಕಲಿತ ವಿದ್ಯೆಯೂ ನಮಗೆ ಒಲಿಯುವುದಿಲ್ಲ (ಕೈ ಹಿಡಿಯುವುದಿಲ್ಲ).